ಅದು ಗೊತ್ತಿಲ್ಲ ಅಂದುಕೊಂಡಿದ್ದಾನೆ. ಮೊದಲೆಲ್ಲ ಮನೆಯ ಹೆಣ್ಣು ಮಕ್ಕಳು ಅಂತಲೇ ಭಾವಿಸಿದ್ದೆ. ಆದರೆ ಆಮೇಲೆ ಗೊತ್ತಾಯಿತು ಅದು ವೀರೂ ಅಂತ. ಈ ಹುಡುಗನಿಗೆ ಏನಾಗಿದೆ? ಮನೆಯಲ್ಲಿ ಎಲ್ಲರಿಗೂ ಗೊತ್ತಾಗಿದೆ, ಅದರೆ ಯಾರೂ ಬಾಯಿ ಬಿಡುತ್ತಿಲ್ಲ. ವಾರಿಜ ಅದಕ್ಕೆ ದಿನೆ ದಿನೇ ಕೊರಗಿ ಕೊರಗಿ ಕಾಯಿಲೆ ಬಂದವಳಂತೆ ಆಗಿದ್ದಾಳೆ. ಮಾದುವಿಗೂ ಗೊತ್ತಿರಬಹುದೊ ಏನೋ, ಅವನೂ ಮಂಕಾಗಿದ್ದಾನೆ. ಈ ಮನೆಗೇನೊ ಗ್ರಹಚಾರ ಬಡಿದಿದೆ, ಯಾರ ಕಣ್ಣು ಬಿದ್ದಿದೆಯೊ ಅಂತ ಕಣ್ಣೀರು ಹಾಕಿದಾಗ ವಿಷಯದ ಗಂಭೀರತೆ ಅರಿವಾಗಿ ಮುಂದೇನು ಅಂತ ಚಿಂತಿತರಾದರು. ಮನೆಯ ಹಿರಿಯನಾಗಿ ಈ ಸಂಕಷ್ಟವನ್ನು ಹೇಗೆ ಪರಿಹರಿಸಿಕೊಳ್ಳುವುದೆಂದು ತಿಳಿಯದೆ ಜಗದೀಶರು ಚಿಂತಿತರಾದರು. ಇಡೀ ರಾತ್ರಿ ಚಿಂತಿಸಿ ಒಂದು ತೀರ್ಮಾನಕ್ಕೆ ಬಂದರು.

ಬೆಳಗ್ಗೆಯೇ ವೀರೂವನ್ನು ಕರೆದುಕೊಂಡು ವೈದ್ಯರಲ್ಲಿಗೆ ಹೋದರು. ಅವರಿಗೆ ಇವನ ನಡತೆಗಳನ್ನೆಲ್ಲಾ ತಿಳಿಸಿ ಪರೀಕ್ಷಿಸಲು ಕೇಳಿಕೊಂಡರು. ಒಳಗೆ ಕರೆದೊಯ್ದು ವೈದ್ಯರು ಕೂಲಂಕಷವಾಗಿ ಪರೀಕ್ಷಿಸಿ, ವೀರೂವನ್ನು ಹತ್ತಾರು ಪ್ರಶ್ನೆ ಮಾಡಿದರು. ಆಗ ಅವರಿಗೂ ವೀರೂವಿನ ಸ್ಥಿತಿ ಅರಿವಾಗಿ ಕನಿಕರದಿಂದ ಅವನನ್ನೇ ನೋಡಿ 'ಸಾರಿ ಮೈ ಬಾಯ್, ಇದು ನಿನ್ನ ತಪ್ಪಲ್ಲ. ದೇವರೇ ಮಾಡಿರುವ ಅನ್ಯಾಯ, ನೀನು ಧೈರ್ಯವಾಗಿ ಅದನ್ನು ಎದುರಿಸಿ ನಿಲ್ಲಬೇಕು. ನಿನ್ನದಲ್ಲದ ತಪ್ಪಿಗೆ ನೀನು ನಿನ್ನನ್ನು ಶಿಕ್ಷಿಸಿಕೊಳ್ಳಬೇಡ, ಮನೆಯವರ ಸಹಕಾರವಿದ್ದರೆ ನೀನು ಹುಟ್ಟಿದ ನೆಲದಲ್ಲಿಯೇ, ನಿನ್ನ ಸ್ಥಿತಿಯಲ್ಲಿಯೇ ಧೈರ್ಯವಾಗಿ ಬದುಕಬಹುದು, ನೀನೇ ಮೊದಲೇನಲ್ಲ, ನಿನ್ನಂಥವರು ಲಕ್ಷ, ಕೋಟಿ ಇದ್ದಾರೆ, ಹೆದರಬೇಡ, ನಾನು ನಿನ್ನವರೊಂದಿಗೆ ಮಾತನಾಡುತ್ತೇನೆ' ಅಂತ ಧೈರ್ಯ ತುಂಬಿದರು. ಬಳಿಕ ಹೊರ ಬಂದು ವೀರೂವನ್ನೂ ಕೂರಿಸಿಕೊಂಡು ಜಗದೀಶರಿಗೆ ಅವನ ಸ್ಥಿತಿ ಬಗ್ಗೆ ಎಳೆಎಳೆಯಾಗಿ ಬಿಚ್ಚಿಟ್ಟರು.

'ಜಗದೀಶ, ನೀವು ಧೈರ್ಯ ತಗೋಬೇಕು. ಅವನ ಮೇಲೆ ನಿಮಗೆ ನಿಜವಾಗಿಯೂ ಪ್ರೀತಿ ಇದ್ದರೆ ಅವನನ್ನು ಅವನ ಇಷ್ಟಬಂದಂತೆ ಬದುಕಲು ಬಿಡಿ, ಮನೆಯವರಿಗೆ ಅದನ್ನು ಒಪ್ಪಿಕೊಳ್ಳಲು ತಿಳಿಸಿ, ಅವನನ್ನು ಪ್ರೀತಿಯಿಂದ ಅವಳಾಗಿ ನೋಡಿ, ಈಗ 'ಅವನು ಅವನಲ್ಲ, ಅವಳು'. ಹಾಗೇ ನೋಡಬೇಕು. ತುಂಬಾ ಕಷ್ಟವಾಗುತ್ತದೆ ನನಗೆ ಗೊತ್ತು. ಆದರೆ ಬೇರೆ ದಾರಿಯಿಲ್ಲ. ನಿಮ್ಮ ಮನೆಯ ಮಗುವಿಗಾಗಿ ಸಹಿಸಲೇಬೇಕು. ಜನ ಹೀಯಾಳಿಸಬಹುದು, ಸಮಾಜ ಒಪ್ಪಿಕೊಳ್ಳದೇ ಇರಬಹುದು. ಬಂಧು ಬಳಗದವರು ಆಡಿಕೊಂಡು ನಗಬಹುದು, ಅದಕ್ಕೆಲ್ಲ ಕೇರ್ ಮಾಡದೆ ನಿಮ್ಮ ಮನೆಯ ಮಗುವನ್ನು ಉಳಿಸಿಕೊಳ್ಳಿ, ನಿಮ್ಮಿಂದ ತಿರಸ್ಕೃತನಾದರೆ ನಿಮ್ಮ ಮನೆ ಮಗು ಬೀದಿಯಲ್ಲಿ ಬೀಳಬೇಕಾಗುತ್ತದೆ. ಬೀದಿಯಲ್ಲಿ ಭಿಕ್ಷೆ ಬೇಡುತ್ತಾ, ಗಂಡಸರಿಗೆ ಸೆರಗು ಹಾಸುತ್ತಾ ಸೂಳೆಯಂತೆ ಬದುಕಬೇಕಾಗುತ್ತದೆ. ಇಲ್ಲ ಅಂದರೆ ನಿಮ್ಮ ಕಣ್ಣ ಮುಂದೆಯೇ ಏನಾದರೂ ಮಾಡಿಕೊಂಡು ಸಾಯುವುದನ್ನು ನೋಡಬೇಕಾಗುತ್ತದೆ. ಆದರೆ ನೀವು ಹಾಗೆ ಮಾಡುವುದಿಲ್ಲ ಅನ್ನೋ ನಂಬಿಕೆ ನನ್ನದು. ಅವನದಲ್ಲದ ತಪ್ಪಿಗೆ ಈಗಾಗಲೇ ಶಿಕ್ಷೆ ಅನುಭವಿಸುತ್ತಿದ್ದಾನೆ. ಅವನಿಗೂ ಬದುಕುವ ಹಕ್ಕಿದೆ, ಅದನ್ನು ಕಿತ್ತುಕೊಳ್ಳಲು ನಾವು ಯಾರು? ನಿಮಗೆ ಆಸ್ತಿ ಇದೆ, ಅಂತಸ್ತು ಇದೆ, ಹೃದಯವಂತಿಕೆ ಇದೆ, ಅವನ ಪರಿಸ್ಥಿತಿ ಒಪ್ಪಿಕೊಂಡು ನಿಮ್ಮ ಮನೆಯ ಮಗುವಿಗೆ ಒಳ್ಳೆಯ ಭವಿಷ್ಯ ಕೊಡಿ. ಬೀದಿಗೆ ತಳ್ಳಬೇಡಿ, ಇದು ನನ್ನ ಬೇಡಿಕೆ' ಅಂತ ಕೇಳಿಕೊಂಡಾಗ ಜಗದೀಶರು ಭೂಮಿಗಿಳಿದು ಹೋದರು. ಅವರ ಮಾತುಗಳು ಕಿವಿಗೆ ಕಾದ ಶೀಶೆ ಹುಯ್ದಂತಾಯಿತು. ತಲೆತಗ್ಗಿಸಿ ಕುಳಿತಿದ್ದ ವೀರೂವನ್ನು ನೋಡಿ ಅಯ್ಯೋ ಮಗುವೇ ಏನಾಗಿ ಹೋಯಿತಪ್ಪ ನಿನ್ನ ಬಾಳು, ನಿನ್ನಮ್ಮ ಅದೆಷ್ಟು ಆಸೆ ಕನಸುಗಳನ್ನು ಹೊತ್ತು ಬೆಳೆಸಿದ್ದಳು. ಯಾವತ್ತೂ ಒಂದು ದಿನ ಹೆಣ್ಣು ಮಕ್ಕಳ ಬಟ್ಟೆ ಹಾಕ್ತಿಯ ಅಂತ ನಿನಗಾಗಿ ಮನೆಯವರನ್ನೆಲ್ಲ ಎದುರು ಹಾಕಿಕೊಂಡು ಮನೆಯಿಂದ ದೂರ ಇಟ್ಟಿದ್ದಳು. ಈಗ ಏನಾಗಿ ಹೋಯಿತು, ಇಡೀ ಜೀವನ ಪರ್ಯಂತ ಹೆಣ್ಣಿನ ವೇಷದಲ್ಲಿ ನೋಡಬೇಕಲ್ಲ, ಆ ಹೆತ್ತ ಹೊಟ್ಟೆ ಹೇಗೆ ಸಹಿಸುತ್ತದೆ. ಮಾದು ಹೇಗೆ ಈ ಸತ್ಯವನ್ನು ಅರಗಿಸಿಕೊಳ್ಳುತ್ತಾನೆ. ಶಾಂಭವಿಗೆ, ಮಕ್ಕಳಿಗೆ ವೀರು ಅಂದ್ರೆ ಪ್ರಾಣ, ಅವರಿಗೆ ಈ ವಿಷಯ ಹೇಗೆ ಹೇಳುವುದು? ಮನೆಗೆ ಒಬ್ಬನೆ ಗಂಡು ಮಗ ಅಂತ ತಲೆ ಮೇಲೆ ಇಟ್ಟು ಮೆರೆಸುತ್ತಿದ್ದೆವು, ಏನಾಗಿ ಹೋಯಿತಪ್ಪ ನಮ್ಮ ಮನೆಗೆ, ಅದೆಷ್ಟು ಹೊತ್ತು ಚಿಂತಿಸುತ್ತಾ ಕುಳಿತಿರುತ್ತಿದ್ದರೊ ಏನೋ, ಅಷ್ಟರಲ್ಲಿ ವೈದ್ಯರು ಎಚ್ಚರಿಸಿ 'ಜಗದೀಶ, ಈಗ ಮನೆಗೆ ಕರೆದುಕೊಂಡು ಹೋಗಿ, ಮನೆಯವರಿಗೂ ವಿಚಾರ ತಿಳಿಸಿ, ಸತ್ಯವನ್ನು ಒಪ್ಪಿಕೊಂಡು ಮುಂದೇನಾಗಬೇಕೊ ಅದನ್ನು ಮಾಡಿ'ಅಂತ ಬೆನ್ನು ತಟ್ಟಿ ಮನೋಸ್ಥೈರ್ಯ ತುಂಬಲು ಯತ್ನಿಸಿದರು.

ಮನೆಗೆ ಬಂದ ಜಗದೀಶರು ಎಲ್ಲರನ್ನು ಬರಲು ಹೇಳಿದರು. ಶಾಂಭವಿ, ವಾರಿಜ, ಮಾದು, ಮಕ್ಕಳು ಎಲ್ಲರೂ ಬಂದು ಕುಳಿತರು. ವೀರೂ ತಲೆ ತಗ್ಗಿಸಿ ಕುಳಿತಿದ್ದ, ವೀರುವನ್ನು ಅಸ್ಪತ್ರೆಗೆ ಕರೆದೊಯ್ದಿದ್ದ ವಿಚಾರ ಎಲ್ಲರಿಗೂ ಗೊತ್ತಿದ್ದರಿಂದ ಅತೀವ ಕುತೂಹಲದಿಂದ ದೊಡ್ಡಪ್ಪ ಏನೂ ಹೇಳುವರೊ ಅಂತ ಕಾಯುತ್ತಾ ಮಕ್ಕಳು ಕುಳಿತಿದ್ದರೆ, ವಾರಿಜ ಢವಗುಡುವ ಎದೆಯನ್ನು ಕೈಯಲ್ಲಿ ಹಿಡಿದು ಯಾವ ಧೂಮಕೇತು ತನ್ನ ಬಾಳಿನಲ್ಲಿ ಬಂದು ಅಪ್ಪಳಿಸುವುದೊ ಅಂತ ಬೆಂಕಿಯಲ್ಲಿ ಕುಳಿತವಳಂತೆ ಕುಳಿತಿದ್ದಳು. ಮಾದು ಮಾತ್ರ ನಿರ್ಲಿಪ್ತವಾಗಿ ಕುಳಿತಿದ್ದ. ಶಾಂಭವಿಗೆ ಆತಂಕವಿದ್ದರೂ ತೋರಿಸಿಕೊಳ್ಳದವಳಂತೆ ಕುಳಿತಿದ್ದಳು.

ಹೇಗೆ ಮಾತು ಶುರು ಮಾಡುವುದು, ಏನಂತ ಹೇಳುವುದು ಅನ್ನೋ ಗೊಂದಲದಲ್ಲಿ ಸ್ವಲ್ಪ ಹೊತ್ತು ಹಾಗೆ ಕುಳಿತಿದ್ದು ನಂತರ ನಿಧಾನವಾಗಿ 'ನೋಡಿ ನಾನು ಹೇಳೋ ವಿಷಯ ತುಂಬಾ ಗಂಭೀರವಾದುದ್ದು, ಸರಿಯಾಗಿ ಕೇಳಿಸಿಕೊಳ್ಳಿ. ನಮ್ಮ ವೀರೂ ಮೊದಲಿಂದಲೂ ಹುಡುಗಿ ಬಟ್ಟೆ ಹಾಕ್ಕೊಳ್ಳೋದು ನಿಮಗೆಲ್ಲ ಗೊತ್ತಿತ್ತು. ಎಷ್ಟು ಹೇಳಿದ್ರೂ ಅವನು ಕೇಳ್ತಿರಲಿಲ್ಲ ಅಂತನೂ ಗೊತ್ತು. ಅದೇ ವಿಷಯಕ್ಕೆ ವೀರೂ ಅವರಮ್ಮನಿಂದ ತುಂಬಾ ಏಟು ತಿನ್ನುತ್ತಿದ್ದ. ಅದೇ ವಿಷಯಕ್ಕೆ ಅವನು ಬೇರೆ ಊರಿಗೆ ಹೋಗಬೇಕಾಯಿತು. ಅವನು ಹಾಗೆ ಮಾಡಲು ಅವನದ್ದೇನೂ ತಪ್ಪಿಲ್ಲ. ದೇವರು ಅವನಿಗೆ ಭಾಳ ದೊಡ್ಡ ಅನ್ಯಾಯ ಮಾಡಿದ್ದಾನೆ. ಗಂಡು ದೇಹ ಕೊಟ್ಟು ಹೆಣ್ಣಿನ ಭಾವನೆ, ಮನಸ್ಸು ಕೊಟ್ಟು ಬಿಟ್ಟವನೆ. ಅದನ್ನು ಸರಿ ಮಾಡೋಕೆ ಆಗಲ್ಲ ಅಂತ ಡಾಕ್ಟ್ರು ಹೇಳಿದ್ದಾರೆ. ಅವನು ಹೆಂಗವನೆ ಅಂಗೆ ನಾವು ಒಪ್ಪಿಕೊಬೇಕಂತೆ. ಅಂದ್ರೆ ವೀರೂ ಇನ್ನು ಮೇಲೆ ಹುಡುಗ ಅಲ್ಲ, ಅವನು ಹುಡುಗಿ. ಇಂಥತವರನ್ನ 'ಮಂಗಳಮುಖಿ' ಅಂತ ಕರಿತಾರಂತೆ. ಇಂಥ ಮಕ್ಕಳನ್ನು ಮನೆಯವರೇ ಗಂಡಾಗಿ ಇರು ಅಂತ ಬಲವಂತ ಮಾಡಿ ಶಿಕ್ಷೆ ಕೊಟ್ಟು ಕೇಳದಿದ್ದರೆ ಮನೆ ಬಿಟ್ಟು ಹೊರಕ್ಕೆ ಹಾಕುತ್ತಾರಂತೆ. ಆಗ ಏನಾದ್ರೂ ಮಾಡ್ಕಂಡು ಸಾಯಬೇಕು ಇಲ್ಲದೇ ಇದ್ರೆ ಆ ಮಕ್ಕಳು ಎಲ್ಲೂ ನೆಲೆ ಇಲ್ಲದೆ, ಯಾರೂ ಹತ್ತಿರ ಸೇರಿಸದೆ ಭಿಕ್ಷೆ ಬೇಡ್ಕಂಡು, ಕಳ್ಳತನ, ಸೂಳ್ಗಾರಿಕೆ ಮಾಡ್ಕಂಡು ಬದುಕ್ತಾರಂತೆ. ಅಂತ ಪರುಸ್ಥಿತಿ ನಮ್ಮನೆ ಮಗೀಗೆ ಬರೋದು ಬ್ಯಾಡಾ. ಅವನು ಇಷ್ಟ ಬಂದಂಗೆ ಇಲ್ಲಿ ಇರಲಿ. ಅವನು ಕದ್ದು ಆಕಾಳ್ತಾ ಇದ್ದ ಹುಡುಗಿ ಬಟ್ಟೆನಾ ಇನ್ನು ಮೇಲೆ ಎಲ್ಲರಿಗೂ ಗೊತ್ತಾಗ ಅಂಗೆ ಹಾಕತನೆ. ನೀವ್ಯಾರು ಅದನ್ನ ವಿರೋಧಿಸಬಾರದು, ಮನೆ ಹೊರಗೂ ಅವನು ಅಂಗೆ ಇರ್ತಾನೆ, ಊರವರು, ನೆಂಟರಿಷ್ಟರು ಆಡ್ಕೊಂಡು ನಗ್ತಾರೆ ಅಂತ ಗೊತ್ತು. ಅದಕ್ಕೆಲ್ಲ ನಾವು ತಲೆಕೆಡಿಸಿಕೊಳ್ಳಬಾರದು. ನಾವು ಅವನಿಗೆ ಧೈರ್ಯ ಕೊಟ್ಟರೆ ಹೊರಗಿನವರನ್ನು ವೀರೂ ಎದುರಿಸುತ್ತಾನೆ. ಓದಕಂತೂ ಓಗಲ್ಲ ಅಂತನೆ. ಮನೆಲೇ ಇದ್ದು ಏನಾದ್ರೂ ಮಾಡ್ಕಳ್ಳಿ. ನಮಗೆ ಇನ್ನು ಮೇಲೆ ಆರು ಹೆಣ್ಣು ಮಕ್ಕಳು' ಅಷ್ಟು ಹೇಳಿ ದುಃಖ ತಡೆಯಲಾರದೆ ಜಗದೀಶರು ಎದ್ದು ಒಳಿಕೆ ವೊಂಟೋದಾಗ ಅಲ್ಲಿದ್ದವರಿಗೆ ಸತ್ಯವನ್ನು ಅರಗಿಸಿಕೊಳ್ಳಲಾರದೆ ಬೆಪ್ಪಾಗಿ ಕುಳಿತೇ ಇದ್ದರು. ವಾರಿಜ ಬಿಕ್ಕಿ ಬಿಕ್ಕಿ ಅಳಲಾರಂಭಿಸಿದಳು, ಶಾಂಭವಿಗೂ ಅಳು ತಡೆಯಲಾಗಲಿಲ್ಲ, ಮಕ್ಕಳು ಅಳುತ್ತಾ ಕುಳಿತುಬಿಟ್ಟರು. ಮಾದುವಿಗೆ ದಿಗ್ಭ್ರಾಂತಿ ಆಗಿ ಕಲ್ಲಿನಂತೆ ಕುಳಿತುಬಿಟ್ಟ. ಅದೆಷ್ಟು ಹೊತ್ತು ಕುಳಿತಿದ್ದರೊ, ಒಳಗೆ ಹೋಗಿ ತಮ್ಮ ದುಃಖವನ್ನು ತಹಬಂದಿಗೆ ತಂದುಕೊಂಡು ಹೊರಬಂದ ಜಗದೀಶರು 'ಏನಾಯ್ತು ಅಂತ ಎಲ್ಲರೂ ಹಿಂಗೆ ಅಳ್ತಾ ಕುಂತಿದಿರಾ, ವೀರೂ ಏನೂ ಸತ್ತು ಹೋಗಿದ್ದಾನಾ, ನಮ್ಮ ಕಣ್ಮುಂದೆ ಇಲ್ವಾ, ಪ್ಯಾಂಟು ಶರ್ಟು ಹಾಕಂಡು ಇರೊ ಬದಲು ಲಂಗ ಹಾಕತ್ತಾನೆ ಅಟೇಯಾ, ಏಳಿ ಮ್ಯಾಕೆ ಎದ್ದು ಕೇಮೆ ನೋಡ್ಕಲಿ, ಎದ್ದೇಳು ಶಾಂಭಾ, ನೀನೇ ಇಂಗೆ ಅಳ್ತಾ ಕುಂತ್ಕಂಡರೆ ಮಕ್ಕಳು, ವಾರೀ ಎಂಗಿರ್ತರೆ, ವೀರನ್ನ ನೋಡು ಎಂಗಾಗಿದ್ದಾನೆ, ಅವನಿಗೂ ಸಮಾಧಾನ ಮಾಡು, ಎದ್ದೇಳಿ ಎಲ್ರೂ' ಅಂತ ಗದರಿಸಿ ಬಲವಂತವಾಗಿ ಏಳಿಸಿದರು. ಸತ್ಯನಾ ಒಪ್ಪಿಕೊಳ್ಳಲೂ ಆಗದೆ, ಬಿಡಲೂ ಆಗದೆ ಮನೆಯವರೆಲ್ಲ ಒಬ್ಬರನೊಬ್ಬರನ್ನು ನೋಡಲಾರದೆ ಕಣ್ಣ ತಪ್ಪಿಸಿಕೊಂಡು ಓಡಾಡತೊಡಗಿದರು.

(ಸಶೇಷ)